
## ನಾಂದಿಪದ



ಕಲೆ: ರೂಪಶ್ರೀ ಕಲ್ಲಿಗನೂರ್

# ಭಾರತಿ-ಭಾರತ

ಕೇಂದ್ರ ಸಾಹಿತ್ಯ ಅಕಾಡೆಮಿಯ 2022ರ ಸಾಲಿನ 'ಯುವ ಪುರಸ್ಕಾರ'ಕ್ಕೆ ಪಾತ್ರರಾದ ಏಳು ಲೇಖಕಿಯರ ಸಂದರ್ಶನಗಳನ್ನು ಒಳಗೊಂಡ 'ಭಾರತಿ–ಭಾರತ' ಕನ್ನಡ ಪತ್ರಿಕೋದ್ಯಮದಲ್ಲಿ ಒಂದು ವಿಶಿಷ್ಟ ನಡೆ. ಯುವ ಪುರಸ್ಕಾರಕ್ಕೆ ಪಾತ್ರರಾದ 24 ಬರಹಗಾರರಲ್ಲಿ, 7 ಮಂದಿ ಬರಹಗಾರ್ತಿಯರು. ದೇಶದ ವಿವಿಧ ಭಾಗ–ಭಾಷೆಗಳ ಈ ಲೇಖಕಿಯರು 'ಮಯೂರ'ದೊಂದಿಗೆ ಮಾತನಾಡಿದ್ದಾರೆ. ಈ ಸಂದರ್ಶನಗಳು ದೇಶದ ವಿವಿಧ ಭಾಷೆಗಳಲ್ಲಿನ ಸಾಹಿತ್ಯಿಕ ಸಂದರ್ಭದ ಸೂಕ್ಷ್ಮನೋಟ ನೀಡುವುದರೊಂದಿಗೆ, ಬರವಣಿಗೆಗೆ ಸಂಬಂಧಿಸಿದಂತೆ ಯುವ ಲೇಖಕಿಯರ ತವಕ ತಲ್ಲಣಗಳನ್ನು ಅರ್ಥ ಮಾಡಿಕೊಳ್ಳಲು ನೆರವಾಗುವಂತಿವೆ. 'ಭಾರತಿ–ಭಾರತ' ಶೀರ್ಷಿಕೆಯ ಟಿಪ್ಪಣಿಗಳೊಂದಿಗೆ ಕನ್ನಡ ಕವಯಿತ್ರಿಯರು, ಕಥೆಗಾರ್ತಿಯರು ಹಾಗೂ ಮಲಯಾಳಂನ ಇಬ್ಬರು ಕವಯಿತ್ರಿಯರ ರಚನೆಗಳು ಈ ಸಂಚಿಕೆಯಲ್ಲಿವೆ. ಈ ಎಲ್ಲ ಬರಹಗಳು ಒಟ್ಟುಗೂಡಿ, 'ಮಯೂರ'ದ ಈ ಸಂಚಿಕೆಗೆ 'ಮಹಿಳಾ ಸಂಭ್ರಮ'ದ ಭಾವ–ಬಣ್ಣ ನೀಡಿರುವಂತೆ ಕಾಣಿಸಿದರೂ, ಅವುಗಳ ಆಳದಲ್ಲಿ ಇರುವುದು ಎಲ್ಲ ಮನಸ್ಸುಗಳನ್ನು ಒಗ್ಗೂಡಿಸುವ ಮಾನವೀಯ ಸಂವೇದನೆಯೇ ಆಗಿದೆ. ಎಂದಿನಂತೆ ಪ್ರಬಂಧ, ವಿಮರ್ಶೆ, ಸ್ಮರಣೆ, ಸ್ಥಿರ ಶೀರ್ಷಿಕೆ, ಅಂಕಣ ಬರಹಗಳು ಹಾಗೂ ಸೊಗಸಾದ ಚಿತ್ರಗಳಿಂದ ಈ ಸಂಚಿಕೆ ಸಮೃದ್ಧವಾಗಿದೆ. ಈ ಸಮೃದ್ಧಿಯ ಗಟ್ಟಿತನ ಅರಿವಿಗೆ ಬರುವುದು ಸಹೃದಯರ ಸ್ಪಂದನಗಳಿಂದಲೇ. ಸಂಚಿಕೆ ಓದಿ, ಪ್ರತಿಕ್ರಿಯಿಸಿ. 'ಮಯೂರ'ದ ಹೊಸತನದ ಅಪೇಕ್ಷೆಗೆ ಹಾಗೂ ಸಮಕಾಲೀನ ಸಾಹಿತ್ಯದ ಕೆನೆಪದರವನ್ನು ಹೊಂದುವ ಹಂಬಲಕ್ಕೆ ಓದುಗರ ಟೀಕೆ–ಟಿಪ್ಪಣಿಗಳೇ ಪ್ರೇರಣೆ–ಪ್ರಚೋದನೆ.

**ಮಯೂರ ಬಳಗ**

**editormy@mayura.co.in**